



# ದೆವ್ವವಿದೆ ಎಚ್ಚರ!




ಪಕ್ಷದಲ್ಲಿ ಯಾವುದೇ ಹುದ್ದೆಯನ್ನು ಕೇಳುವುದಿಲ್ಲ ಎಂದು ಆಶ್ವಾಸನೆ ನೀಡ್ತೇನೆ.. ಸೂಟ್‌ಕೇಸ್ ಕೊಟ್ಟಿದ್ದಕ್ಕೆ ತುಂಬಾ ಥ್ಯಾಂಕ್ಸ್!

## ದೆವ್ವಗಳೇಕೆ ರಾತ್ರಿ ಮಾತ್ರ ಕಾಣುತ್ತವೆ? ಹಗಲಿನಲ್ಲಿ ಎಲ್ಲಿ ಹೋಗಿರುತ್ತವೆ?

ಮಹಾನ್ ಧೈರ್ಯಶಾಲಿಯೊಬ್ಬ ಅಮಾವಾಸ್ಯೆಯ ಕತ್ತಲಲ್ಲಿ ಸ್ಮಶಾನಕ್ಕೆ ಹೋಗಿ ಒಂದು ಮರಕ್ಕೆ ಮೊಳೆ ಹೊಡೆದು ಹಿಂದಿರುಗುವೆನೆಂದು ಹೇಳಿದ. ಅಲ್ಲಿ ಹೋದವನು, ಗಡಿಬಿಡಿಯಲ್ಲಿ ತನ್ನ ಪಂಚೆಯನ್ನು ಸೇರಿಸಿಕೊಂಡೇ ಮೊಳೆ ಹೊಡೆದು, ಎದ್ದಾಗ ಜಗ್ಗಿದ ಪಂಚೆಯನ್ನು ದೆವ್ವವೇ ಜಗ್ಗಿತೆಂದು ಭಾವಿಸಿ ಅಸು ನೀಗಿದ– ಇದೆಲ್ಲ ನಿಮಗೆ ತಿಳಿದ ಕಥೆಯೇ.

ಸ್ವಾರಸ್ಯಕರವಾದ ಅಂಶವೆಂದರೆ ನಿರ್ಭೀತನಿಗೂ ಸಹ ದೆವ್ವಗಳು ದಿನದ ಬೆಳಕಿನಲ್ಲಿ ಕಾಣದೆ, ಬರಿದೇ ಕತ್ತಲಿನಲ್ಲಿ, ಅದರಲ್ಲೂ ಹೆಚ್ಚಾಗಿ ಅಮಾವಾಸ್ಯೆಯಲ್ಲಿ, ಕಾಣಿಸಿಕೊಳ್ಳುವುದು!

ಏಕೆ ಹೀಗೆ? ದೆವ್ವಗಳೇಕೆ ಹಗಲಲ್ಲಿ ಕಾಣಿಸುವುದಿಲ್ಲ? ದೆವ್ವಗಳೂ ಸಹ ನೈಟ್ ಬೀಟ್ ಪೊಲೀಸರಂತೆ, ಸಾಫ್ಟ್‌ವೇರ್ ಎಂಜಿನಿಯರ್‌ಗಳಂತೆ ದಿನವೆಲ್ಲಾ ನಿದ್ರಿಸಿ, ರಾತ್ರಿ ಮಾತ್ರ ಡ್ಯೂಟಿ ಮಾಡುತ್ತವೇನು?

ಅಸಲಿಗೆ ದೆವ್ವ ಎಂದರೇನು? ಅದು ಇದೆಯೇ? ಇದ್ದರೆ ಅದು ಎಲ್ಲಿ ಇರುತ್ತದೆ?

ವೈಚಾರಿಕ ದೃಷ್ಟಿಕೋನದಲ್ಲಿ ಈ ವಿಷಯವನ್ನು ವಿವರಿಸಬೇಕು. ಬನ್ನಿ, ಅಂದಿನ ದಿನಗಳತ್ತ ಕೊಂಚ ಸಾಗೋಣ.

ಇಂದಿನ ಹಾಗೆ ಅಂದಿನ ಕಾಲದಲ್ಲಿ ಶವಗಳನ್ನು ಸುಡಲು ವಿದ್ಯುಚ್ಛಕ್ತಿಯ ಚಿತಾಗಾರಗಳು ಇರಲಿಲ್ಲ. ಪ್ರತಿ ಸುಡುವಿಕೆಯೂ ಚಟ್ಟದ ಮೇಲೆ, ಬಟಾಬಯಲಾದ ಸ್ಮಶಾನದಲ್ಲಿಯೇ ನಡೆಯಬೇಕಾಗಿತ್ತು.

ಮನುಷ್ಯನ ದೇಹ ಸುಡುವುದಕ್ಕೆ ಸುಮಾರು ಆರರಿಂದ ಎಂಟು ಗಂಟೆಗಳ ಅವಧಿಯಾದರೂ ಬೇಕೇ ಬೇಕು. ಚರ್ಮ, ಮಾಂಸ, ರಕ್ತಗಳು ಬೇಗನೆ ಸುಟ್ಟರೂ, ಬುರುಡೆ ಹಾಗೂ ಮೂಳೆಗಳು ಬೂದಿಯಾಗಬೇಕಾದರೆ ಬಹಳ ಶಾಖ ಮತ್ತು ಸಾಕಷ್ಟು ಸುಡುವಿಕೆಯ ಅಗತ್ಯ ಇರುತ್ತದೆ.

ಕಟ್ಟಿಗೆ ಹಾಗೂ ಬೆರಣಿಗಳನ್ನು ಬಳಸಿ ಗಾಳಿ ಜೋರಾಗಿ ಬೀಸುವ ಸ್ಮಶಾನದಲ್ಲಿ ಸುಡಲ್ಪಟ್ಟ ಶವಗಳು ಸಂಪೂರ್ಣವಾಗಿ ಸುಡುವುದಿಲ್ಲ. ಮೂಳೆಯ ತುಣುಕುಗಳು ಶಾಖ ಸಾಲದ ಕಾರಣ ಹಾಗೆಯೇ ಉಳಿದು ಬಿಡುತ್ತವೆ. ರಂಜಕದ ಅಂಶವನ್ನು ಹೆಚ್ಚಾಗಿ ಹೊಂದಿರುವ ಬಿಳಿಯ ಬಣ್ಣದ ಮೂಳೆಗಳು ಸುಡದೆ ಬೂದಿಯ ಮಧ್ಯೆ ಹಾಗೆಯೇ ಹುದುಗಿಕೊಂಡಿರುತ್ತವೆ.

ಸಂಜೆಯಾಗುತ್ತಿದ್ದಂತೆ ಸ್ಮಶಾನದ ಬಯಲು ಪ್ರದೇಶದಲ್ಲಿ ಗಾಳಿಯ ರಭಸ ಕೊಂಚ ಹೆಚ್ಚಾಗುತ್ತದೆ. ಇದರಿಂದ ಮೂಳೆಗಳನ್ನು ಆವರಿಸಿದ್ದ ಬೂದಿ ಕೊಂಚ ಕೊಂಚವಾಗಿ ಗಾಳಿಯಿಂದ ಕೊಂಡೊಯ್ಯಲ್ಪಡುತ್ತದೆ. ಒಳಗೆ ಹುದುಗಿದ್ದ ಮೂಳೆಗಳು ಈಗ ಮೇಲಕ್ಕೆ ಕಾಣುವಂತಾಗುತ್ತವೆ. ದೂರದಿಂದ ನೋಡಿದವರಿಗೆ ಹೆಣ ಸುಟ್ಟ ಜಾಗದಲ್ಲಿ ಏನೋ ಬಿಳಿಯದು ಇರುವುದು ಕಾಣುತ್ತದೆ.

ಸಂಜೆಯ ಗಾಳಿಯಲ್ಲಿ ತೇವಾಂಶ ಹೆಚ್ಚು. ಕತ್ತಲಿನಲ್ಲಿ ಹೊಳೆಯುವ ರಂಜಕದ ಅಂಶವನ್ನು ಹೇರಳವಾಗಿ ಹೊಂದಿರುವ ಮೂಳೆಗಳನ್ನು ಕತ್ತಲು ಆವರಿಸಿದ ಮೇಲೆ ಆ ತೇವಾಂಶಭರಿತ ಗಾಳಿಯ ತೆರೆಯ ಮೂಲಕ ನೋಡಿದಾಗ ಆ ಮೂಳೆಗಳು ಅಲುಗಾಡಿದಂತಹ ಅನುಭವವಾಗುತ್ತದೆ. ಧೈರ್ಯವಂತರಿಗಾದರೆ ಅವು ಬರಿದೇ ಮೂಳೆಗಳಾಗಿಯೇ ಕಾಣುತ್ತವೆ; ಆದರೆ ದೆವ್ವದಲ್ಲಿ ನಂಬಿಕೆ ಹಾಗೂ ದೆವ್ವವೆಂದರೆ ಹೆದರುವ ಜನರು ನೋಡಿದರೆ, ಅವರ ಮನಸ್ಸು ಈ ಸರಿದಾಡುವಂತೆ ಕಾಣುವ ಮೂಳೆಗಳಿಗೆ ಒಂದು ಆಕಾರವನ್ನು ಕಲ್ಪಿಸುತ್ತದೆ. ಮೂಳೆಗಳಲ್ಲಿನ ರಂಜಕದ ಬಿಳಿ ಗಾಳಿಗೆ ಆಡಿದಂತೆ ಕಾಣುತ್ತಾ, ನೋಡುಗರ ಮನದಲ್ಲಿನ ಆಕಾರದಂತೆ, ಇವರ ಮನೋವಿಕಲ್ಪದ ಕಾರಣ, ಕಾಣುತ್ತದೆ. ಇದೇ ದೆವ್ವ! ಕತ್ತಲಿನಲ್ಲಿ ರಂಜಕದ ಹೊಳಪು ಎದ್ದು ಕಾಣುವುದರಿಂದ, ಅಂಜಿಕೆ ಇರುವವರ ಮನ ಅದಕ್ಕೆ ರೂಪು ಕೊಡುವುದರಿಂದ ಅಮಾವಾಸ್ಯೆಯ ಕತ್ತಲಿನಲ್ಲಿಯೇ ದೆವ್ವದ ಇತಿಹಾಸ ಹೆಚ್ಚಾಗಿ ಕಂಡುಬರುತ್ತದೆ.

■ ವೈ–ಚಾರಿ







ನೀವು ಹೀಗೇ ಮುಂದೆ ಹೋಗ್ತಾ ಇರಿ... ನಾನೊಂದು ಜರದಾಪಾನ್ ಹಾಕ್ಕೊಂಡು ಬಂದು ಬಿಡ್ತೀನಿ!